ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 2, May-June 2024, Pp. 100-105
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮಹಿಳಾ ವಿಮೋಚನೆ

**ಡಾ. ಸೌಮ್ಯಶ್ರೀ ಎಸ್. ಕೆ**
ಅಥಿತಿ ಉಪನ್ಯಾಸಕರು, ಮಹಿಳಾ ಅಧ್ಯಯನ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.

**Abstract:**
*ಜೈವಿಕ ಭಿನ್ನತೆಗಳ ಹೊರತಾಗಿ ಸ್ತ್ರೀ–ಪುರುಷರಿಬ್ಬರೂ ಸಮಾನರು ಹಾಗೂ ಸಮಾನ ಪ್ರಾಮುಖ್ಯತೆಯನ್ನು ಉಳ್ಳವರಾಗಿದ್ದಾರೆ. ಆದರೆ ಪಿತೃಪ್ರಧಾನ ಸಮಾಜವು ಪುರುಷರು ಶ್ರೇಷ್ಠ ಎಂಬಂತೆ ಬಿಂಬಿಸುತ್ತಾ, ಪುರುಷರಿಗೆ ಪ್ರಧಾನ ಸ್ಥಾನವನ್ನು ನೀಡಿ, ಮಹಿಳೆಯರನ್ನು ಎರಡನೆ ಸ್ಥಾನದಲ್ಲಿ ನೋಡುತ್ತದೆ. ಹಿಂದಿನ ಮಹಿಳೆಯರ ಸ್ಥಿತಿಗತಿಗಳಿಗೆ ಹೋಲಿಸಿದರೆ ಇಂದಿನ ಮಹಿಳೆಯರ ಸ್ಥಿತಿಗತಿಗಳು ಉತ್ತಮವಾಗಿರುವುದನ್ನು ಗಮನಿಸಬಹುದಾದರೂ, ಪಿತೃಪ್ರಧಾನ ಸಮಾಜದ ಧೋರಣೆಗಳು ಬದಲಾಗಿಲ್ಲ, ಮಹಿಳೆಯರನ್ನು ಎರಡನೆ ದರ್ಜೆಯವರನ್ನಾಗಿ ನೋಡುವ ಆಲೋಚನೆಗಳು ಇಂದಿಗೂ ಇವೆ. ಸ್ತ್ರೀ ಶೋಷಣೆಗಳು, ಸ್ತ್ರೀಯರ ಮೇಲಿನ ದೌರ್ಜನ್ಯಗಳು ನಡೆಯುತ್ತಲೇ ಇವೆ. ಹಿಂದಿನಿಂದಲೂ ಸ್ತ್ರೀವಾದಿಗಳು, ಸ್ತ್ರೀಪರ ಆಲೋಚನೆ ಉಳ್ಳವರು ಸ್ತ್ರೀಯರ ಸ್ಥಾನಮಾನಗಳನ್ನು ಉತ್ತಮ ಪಡಿಸುವ ಬಗ್ಗೆ, ಅವರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆ ಹಾಗೂ ಸ್ತ್ರೀ ಶೋಷಣೆಗಳ ವಿರುದ್ಧ ಧ್ವನಿ ಎತ್ತುತ್ತಲೇ ಇದ್ದಾರೆ, ಹೋರಾಟ ನಡೆಸುತ್ತಲೇ ಇದ್ದಾರೆ, ಮಹಿಳಾ ವಿಮೋಚನೆಗಾಗಿ ಶ್ರಮಿಸುತ್ತಲೇ ಇದ್ದಾರೆ. ಮಹಿಳೆಯರ ಅಭಿವೃದ್ಧಿ ಮತ್ತು ಸಬಲೀಕರಣಕ್ಕೆ ಮಹಿಳಾ ವಿಮೋಚನೆಯು ಪ್ರಮುಖ ಅಂಶವಾಗಿದೆ. ಪ್ರಸ್ತುತ ಲೇಖನದಲ್ಲಿ ಮಹಿಳಾ ವಿಮೋಚನೆ ಪರಿಕಲ್ಪನೆ ಮತ್ತು ಅದರ ಅಗತ್ಯತೆ ಮತ್ತು ಪ್ರಾಮುಖ್ಯತೆಗಳ ಬಗ್ಗೆ ತಿಳಿಯಬಹುದಾಗಿದೆ. ಪ್ರಸ್ತುತ ಲೇಖನದಲ್ಲಿ ಮಾಧ್ಯಮಿಕ ಮೂಲಗಳಾದ ಪುಸ್ತಕಗಳು, ಲೇಖನಗಳು, ವರದಿಗಳು ಹಾಗೂ ನಿಯತಕಾಲಿಕೆಗಳಿಂದ ಮಾಹಿತಿಯನ್ನು ಕಲೆಹಾಕಲಾಗಿದೆ.*

**Keywords:** *ಮಹಿಳಾ ವಿಮೋಚನೆ, ಸ್ತ್ರೀವಾದ, ಮಹಿಳಾ ಚಳವಳಿ.*

### ಪೀಠಿಕೆ

ಮಹಿಳಾ ವಿಮೋಚನೆ ಎಂಬುದು ಮಹಿಳಾ ಅಧ್ಯಯನದ ಒಂದು ಪ್ರಮುಖ ಪರಿಕಲ್ಪನೆಯಾಗಿದೆ. ಮಹಿಳಾ ವಿಮೋಚನೆ ಎಂದರೆ ಮಹಿಳೆಯರು ಸಮಾಜದಲ್ಲಿ ವಿವಿಧ ಕ್ಷೇತ್ರಗಳಲ್ಲಿ, ವಿವಿಧ ನೆಲೆಗಳಲ್ಲಿ ಎದುರಿಸುತ್ತಿರುವ ಹಲವು ವಿದಧ ದೌರ್ಜನ್ಯ, ದಬ್ಬಾಳಿಕೆ, ಶೋಷಣೆಗಳಿಂದ ಆಕೆಯನ್ನು ಮುಕ್ತಗೊಳಿಸುವುದಾಗಿದೆ. ಇವೆಲ್ಲವುಗಳಿಂದ ಅವಳನ್ನು ಮುಕ್ತಿಗೊಳಿಸುವ ಮೂಲಕ ಸ್ವಾತಂತ್ರ್ಯದ ಹಾಗೂ ಸಮಾನತೆಯ ಬದುಕನ್ನು ಆಕೆಗೆ ಕಟ್ಟಿಕೊಡುವುದೇ ಮಹಿಳಾ ವಿಮೋಚನೆಯ ಉದ್ದೇಶವಾಗಿದೆ. ಸ್ತ್ರೀವಾದ ಹಾಗೂ ಸ್ತ್ರೀವಾದಿಗಳು ಹೋರಾಟ ನಡೆಸಿದ್ದೂ ಸಹ ಮಹಿಳಾ ವಿಮೋಚನೆಗಾಗಿಯೇ ಹಲವು ಸ್ತ್ರೀವಾದದ ಪಂಥಗಳಿದ್ದರೂ, ಹಲವು ವಿದಧ ಸ್ತ್ರೀವಾದಿಗಳಿದ್ದರೂ, ಅವರು ಮಹಿಳಾ

***Please cite this article as:*** ಸೌಮ್ಯಶ್ರೀ ಎಸ್. ಕೆ. (2024). ಮಹಿಳಾ ವಿಮೋಚನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(2), 100–105

ಶೋಷಣೆಗಳನ್ನು, ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯ, ದಬ್ಬಾಳಿಕೆಗಳನ್ನು, ಮಹಿಳೆಯರು ಎದುರಿಸುತ್ತಿರುವ ಅಸಮಾನತೆ, ತಾರತಮ್ಯಗಳನ್ನು ನಿವಾರಿಸಲು ಆಯ್ಕೆ ಮಾಡಿಕೊಂಡ ಮಾರ್ಗಗಳು ಹಲವಿದ್ದರೂ ಸಹ ಅವರ ಉದ್ದೇಶ ಮಾತ್ರ ಒಂದೇಯಾಗಿತ್ತು, ಅದು ಮಹಿಳಾ ವಿಮೋಚನೆ.

ಸ್ತ್ರೀವಾದಿಗಳೇ ಹೇಳುವಂತೆ ಪಿತೃಪ್ರಧಾನ ಸಮಾಜದಲ್ಲಿ ಮಹಿಳೆ ಎರಡನೆ ದರ್ಜೆಯ ಸ್ಥಾನವನ್ನು ಪಡೆದುಕೊಂಡಿದ್ದಾಳೆ. ಪಿತೃಗಳದ್ದೇ ಇಲ್ಲಿ ಮೊದಲನೇ ಸ್ಥಾನ, ಅವರದ್ದೇ ಯಜಮಾನಿಕೆ. ಸಮಾಜದ ಪದ್ದತಿ, ರೂಢಿ, ಸಂಪ್ರದಾಯ, ಆಚಾರ, ವಿಚಾರಗಳೆಲ್ಲವೂ ಸಹ ಪಿತೃಪ್ರಧಾನ್ಯತೆಯ ಮೌಲ್ಯಗಳಿಗೆ ಬದ್ಧವಾಗಿ ಪಿತೃಗಳಿಂದಲೇ ತಯಾರಾಗಿವೆ ಅಥವಾ ಸಿದ್ಧವಾಗಿವೆ. ಇವುಗಳನ್ನು ರೂಪಿಸುವಾಗ ಎಲ್ಲೆಲ್ಲಿ ಸಾಧ್ಯವೋ ಎಷ್ಟು ಸಾಧ್ಯವೊ ಅಷ್ಟು ಮಹಿಳೆಯನ್ನು ಪುರುಷಪ್ರಾಧಾನ್ಯತೆ ತನ್ನ ಅಂಕೆಯಲ್ಲಿಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಕಟ್ಟು ನಿಟ್ಟಾದ ಆಚರಣೆಗಳನ್ನು ಅನುಸರಿಸುವುದು, ಸಂಸ್ಕೃತಿಯ ಉಳಿಸುವಿಕೆ ಮತ್ತು ಮುಂದುವರೆಸುವಿಕೆ ಹೆಣ್ಣಿನ ಜಾವಾಬ್ದಾರಿ ಎಂಬಂತೆ ರೂಢಿಸಿರುವುದು. ಆದರ್ಶ ನಾರಿಯ ಮಾದರಿಗಳು, ಚಿತ್ರಣಗಳು, ತಾಯ್ತನ, ಪಾತಿವ್ರತ್ಯ, ಪಾವಿತ್ರತೆ, ಹೆಣ್ತನ, ಮೊದಲಾದವುಗಳಿಗೆ ಸಂಬಂಧಿಸಿದಂತೆ ಕೆಲವೊಂದು ಮಿಥ್ಯೆಗಳನ್ನು ರೂಪಿಸಿ, ರೂಢಿಸಿ ಅವುಗಳನ್ನು ಮಹಿಳೆ ಅಂತರ್ಗತ ಮಾಡಿಕೊಳ್ಳುವಷ್ಟರ ಮಟ್ಟಿಗೆ ಬೆಳೆಸಿವೆ. ಹೀಗೆ ಮಾಡುವ ಮೂಲಕ ನೈಜ್ಯವಾದ ಸ್ತ್ರೀಯರ ಸ್ಥಾನಮಾನಗಳ ಬಗ್ಗೆ ಅವರಿಗೆ ಅರಿವು ಕೂಡ ಇಲ್ಲದಂತೆ ಆಗಿದೆ.

ಪುರುಷರಿಗೆ ಸಮಾನವಾಗಿ ಸಮಾನಹಕ್ಕುಗಳು, ಅವಕಾಶಗಳು ಮತ್ತು ಸ್ಥಿತಿಗಳನ್ನು ಮಹಿಳೆಯರಿಗೆ ಒದಗಿಸುವುದು ಅವಶ್ಯಕ ಮತ್ತು ನೈತಿಕವಾಗಿ ಕಡ್ಡಾಯ ಎಂಬ ದೃಷ್ಟಿಕೋನಗಳ ಪ್ರಬಲ ಪ್ರತಿಪಾದನೆ ಮತ್ತು ಸಮರ್ಥನೆಯನ್ನು "ಸ್ತ್ರೀವಾದ" ಎಂದು ಕರೆಯಲಾಗುತ್ತದೆ. ಪುರುಷರು ಮತ್ತು ಮಹಿಳೆಯರು ಸಮಾನವಾಗಿ ಹುಟ್ಟಿದ್ದಾರೆ ಮತ್ತು ಅವರಿಗೆ ಎಲ್ಲಾ ರೀತಿಯ ಸಮಾನತೆಯನ್ನು ನೀಡಬೇಕು. ಯಾವುದೇ ಲೈಂಗಿಕ ತಾರತಮ್ಯ ಇರಬಾರದು. ಮಹಿಳೆಯರನ್ನು ವಿಶೇಷವಾಗಿ ಪುರುಷರಿಗಿಂತ ಕೆಳಮಟ್ಟದಲ್ಲಿಟ್ಟು ಅವರನ್ನು "ಎರಡನೆಯ ಲಿಂಗ"ದ ವ್ಯಕ್ತಿಗಳಾಗಿ ಪರಿಗಣಿಸುವುದು ನ್ಯಾಯೋಚಿತವಲ್ಲ, ಮಹಿಳಾ ಹಕ್ಕುಗಳ ಬಗ್ಗೆ ಸಮಾನ ಗೌರವ ತೋರಿಸಬೇಕು. ಮಹಿಳಾ ನಾಯಕತ್ವದಲ್ಲಿ ಈ ದೃಷ್ಟಿಕೋನಗಳ ಬೆಂಬಲವಾಗಿ ಪ್ರಾರಂಭವಾದ ಸಾಮಾಜಿಕ ಚಳವಳಿಯನ್ನು 'ಸ್ತ್ರೀ ಸಮಾನತಾವಾದಿ ಚಳವಳಿ' ಅಥವಾ 'ಮಹಿಳಾ ಚಳವಳಿ' ಅಥವಾ 'ಮಹಿಳಾ ವಿಮೋಚನೆ ಚಳುವಳಿ' ಎಂದು ಪರಿಗಣಿಸಬಹುದು.

ದಿ ನ್ಯೂ ಎನ್ಸೈಕ್ಲೋಪೀಡಿಯಾ ಬ್ರಿಟಾನಿಕಾ ಪ್ರಕಾರ ಮಹಿಳಾ ವಿಮೋಚನಾ ಚಳವಳಿ ಕೂಡ ಸ್ತ್ರೀವಾದಿ ಚಳವಳಿ ಎಂದು ಕರೆಯಲ್ಪಡುವ ಸಾಮಾಜಿಕ ಚಳವಳಿಯನ್ನು ಸೂಚಿಸುತ್ತದೆ. ಅದು ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡುತ್ತದೆ. ಪುರುಷರಿಗೆ ಮತ್ತು ಸ್ತ್ರೀಯರಿಗೆ ತಮ್ಮ ವೃತ್ತಿ ಜೀವನ ಮತ್ತು ಜೀವನ –ಪಾಲುದಾರರನ್ನು ನಿರ್ಧರಿಸುವ ಸ್ವಾತಂತ್ರ್ಯದೊಂದಿಗೆ ಸಮಾನ ಸ್ಥಾನಮಾನವನ್ನು ನೀಡುತ್ತದೆ. ಪಾಶ್ಚಾತ್ಯ ಮೂಲದ ಸ್ತ್ರೀಸಮಾನತಾವಾದಿ ಚಳವಳಿ ಸಾಮಾನ್ಯವಾಗಿ ಕೈಗಾರಿಕಾ ಕ್ರಾಂತಿಯ ಹರುಡುವಿಕೆ ಮತ್ತು ಸಾಂಪ್ರದಾಯಿಕ ರೂಢಿಗಳ ಕುಸಿತ ಮತ್ತು ಮಹಿಳೆಯರಿಂದ ಆರ್ಥಿಕ ಸ್ವಾತಂತ್ರ್ಯದ ಸಾಧನೆ ಹಿನ್ನೆಲೆಯಲ್ಲಿ ಪ್ರಾರಂಭವಾಗಿದೆ.

17ನೇ ಶತಮಾನದ ಕೊನೆ ಭಾಗದಲ್ಲಿ ಸ್ತ್ರೀಪರ ಚಿಂತನೆಗಳು ಪ್ರಾರಂಭವಾದರೂ ಅವು ಚಳುವಳಿಯ ರೂಪ ಪಡೆದುಕೊಂಡಿದ್ದು 19ನೇ ಶತಮಾನದಲ್ಲಿ, ಇದಕ್ಕೆ ಮೂಲ ಆ ಸಮಯದಲ್ಲಿ ಹುಟ್ಟಿಕೊಂಡ ಸಮಾನತೆ ಹಾಗೂ ಸ್ವಾತಂತ್ರ್ಯದ ತತ್ತ್ವಗಳು. ಈ ತತ್ತ್ವಗಳನ್ನು ಮಹಿಳೆಯರಿಗೂ ಅನ್ವಯಿಸಿಕೊಂಡು ಸ್ತ್ರೀವಾದಿ ಚಿಂತನೆಗಳು ಹುಟ್ಟಿಕೊಂಡವು. ಭಾರತದಲ್ಲಿ ಮಹಿಳಾ ಚಳುವಳಿ ಸ್ವಾತಂತ್ರ್ಯ ಚಳುವಳಿಯೊಂದಿಗೆ ಬೆಳೆದು ಬಂದಿತು. ಅಮೇರಿಕಾದ ಮಹಿಳಾ ಚಳುವಳಿ

ಮತದಾನದ ಹಕ್ಕಿಗಾಗಿ ತನ್ನ ಹೋರಾಟವನ್ನು ಪ್ರಾರಂಭಿಸಿತು. 18ನೇ ಶತಮಾನದಲ್ಲಿ ಸ್ತ್ರೀ ಪುರುಷರ ನಡುವಿನ ಅಸಮಾನತೆಯನ್ನು ಗುರುತಿಸಿದರೂ ಅದು ಸ್ಪಷ್ಟತೆಯನ್ನು ಪಡೆದುಕೊಂಡು ಹೋರಾಟವಾಗಿ ರೂಪುಗೊಂಡಿದ್ದು 19ನೇ ಶತಮಾನದಲ್ಲಿ. 1960ರ ನಂತರದಲ್ಲಿ ಮಹಿಳಾ ವಿಮೋಚನಾ ಚಳುವಳಿ ಪ್ರಾರಂಭವಾದವು. ಸ್ತ್ರೀವಾದಿ ಚಳುವಳಿಯ ಮೊದಲ ಅಲೆಯಲ್ಲಿ ಸಮಾನತೆ ಸಾಧಿಸಲು, ಮತದಾನದ ಹಕ್ಕಿಗಾಗಿ ಚಳುವಳಿ ನಡೆಸಲಾಯಿತು. ಎರಡನೆ ಅಲೆಯಲ್ಲಿ ವಿಭಿನ್ನ ಸ್ತ್ರೀವಾದಿ ವಿಚಾರಗಳನ್ನು ಕುರಿತು ಚಳುವಳಿಗಳನ್ನು ಮುಂದುವರೆಸಲಾಯಿತು. ಎರಡನೆ ಅಲೆಯಲ್ಲಿಯೂ ಎರಡು ಗುಂಪುಗಳಿದ್ದು ಒಂದು ಗುಂಪು ಮಹಿಳಾ ಹಕ್ಕುಗಳ ಗುಂಪು ಆಗಿದ್ದು, ಇದು ಕಾನೂನಿನಲ್ಲಿ ಬದಲಾವಣೆ, ಉದ್ಯೋಗ ನೀತಿ ಮತ್ತು ಶಿಕ್ಷಣಕ್ಕೆ ಕೇಂದ್ರೀಕರಿಸಿ ಕೆಲಸ ಮಾಡಿತು. ಎರಡನೆ ಗುಂಪು ಮಹಿಳಾ ವಿಮೋಚನಾ ಗುಂಪು ಇದು ಸಾಮಾಜೀಕರಣದಲ್ಲಿ ಬದಲಾವಣೆ, ಮಹಿಳೆಯರ ಬಗ್ಗೆ ಇದ್ದ ಪ್ರತೀಕಗಳಲ್ಲಿ ಬದಲಾವಣೆ ಇತ್ಯಾದಿಗಳಿಗೆ ಹೆಚ್ಚಿನ ಗಮನ ನೀಡಿತು. ಮಹಿಳಾ ವಿಮೋಚನಾ ಗುಂಪು 1964ರಲ್ಲಿ ಹುಟ್ಟಿಕೊಂಡ 'ಬ್ಲಾಕ್ ಸಿವಿಲ್ ರೈಟ್ಸ್ ಮೂವ್‌ಮೆಂಟ್'ನ ಒಂದು ಭಾಗವಾಗಿ ಹೊರಬಂದಿತು. ಈ ಸಂಘಟನೆಯಲ್ಲಿದ್ದ ಕಪ್ಪು ಮತ್ತು ಬಿಳಿ ಮಹಿಳೆಯರು ಚಳವಳಿಯಲ್ಲಿ ತಮ್ಮ ಪಾತ್ರ, ಸ್ಥಾನದ ಕುರಿತು ಪರಿಶೀಲನೆ ಮಾಡಿಕೊಂಡರು. ಒಟ್ಟಾರೆಯಾಗಿ ಮಹಿಳಾ ಚಳವಳಿಯ ಮೊದಲ ಅಲೆಯಲ್ಲಿ ಸಮಾನ ಕಾನೂನುಗಳ ಜಾರಿ, ಉತ್ತಮ ಗುಣಮಟ್ಟದ ಶಿಶು ಕೇಂದ್ರ ಸ್ಥಾಪನೆ, ಜೀವನ ಶೈಲಿಯ ಆಯ್ಕೆ–ವಿವಾಹ, ತಾಯ್ತನ ಮತ್ತು ಉದ್ಯೋಗಳಲ್ಲಿ, ಹಕ್ಕು–ಸುರಕ್ಷಿತ ಮತ್ತು ಕಾನೂನು ಬದ್ಧವಾದ ಗರ್ಭಪಾತ, ಪಠ್ಯಕ್ರಮದಲ್ಲಿ ರೂಢಿಬದ್ಧ ಲಿಂಗ ಪಾತ್ರಗಳ ಚಿತ್ರಣದಲ್ಲಿ ಬದಲಾವಣೆ ಮತ್ತು ಸಮಾನ ಉದ್ಯೋಗವಕಾಶ ಮೊದಲಾದವುಗಳಿಗೆ ಒತ್ತು ನೀಡಿದ್ದಾರೆ.

ಎರಡನೆ ಅಲೆಯಲ್ಲಿನ ವಿಮೋಚನಾ ಚಳುವಳಿಯಲ್ಲಿ ಸಮಾಜದಲ್ಲಿ ತೀವ್ರ ಬದಲಾವಣೆ ತರುವುದು, ಸಮಾನತೆಗೆ ಹೋರಾಡುವುದು, ಕಾನೂನು, ರಾಜಕೀಯ ಅಥವಾ ಆರ್ಥಿಕ ಕ್ಷೇತ್ರಗಳಲ್ಲಿರುವ ತಾರತಮ್ಯವನ್ನು ಹೋಗಲಾಡಿಸುವುದು, ಮಹಿಳೆಯರು ತಮ್ಮ ದೇಹದ ಮೇಲೆ ನಿಯಂತ್ರಣ ಹೊಂದುವಂತೆ ಮಾಡುವುದು, ಸಾಮಾಜೀಕರಣದಲ್ಲಿರುವ ಲಿಂಗ ಪಾತ್ರವನ್ನು ಬದಲಾಯಿಸುವುದು ಹಾಗೂ ಗರ್ಭಪಾತ, ಅತ್ಯಾಚಾರ, ಉದ್ಯೋಗಕ್ಕೆ ಸಂಬಂಧಪಟ್ಟಂತೆ ಮಹಿಳೆಯರ ಪರವಾಗಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡುವುದು, ಮಹಿಳಾ ಸಮಸ್ಯೆಗಳ ಬೇರಿಗೆ ಕೈ ಹಾಕುವುದು, ಲಿಂಗ ಸಂಬಂಧ ಮತ್ತು ಸಾಮಾಜಿಕ ಸಂಸ್ಥೆಗಳಲ್ಲಿ ಕ್ರಾಂತಿಕಾರಕ ಪರಿವರ್ತನೆ ತರುವುದು, ಸಮಾಜದ ಸಾಂಪ್ರದಾಯಿಕ ರಚನೆಯನ್ನು ಪ್ರಶ್ನಿಸುವುದು ಮತ್ತು ಬದಲಾಯಿಸುವುದಾಗಿದೆ.

ಮಹಿಳಾ ಚಳುವಳಿಯ ಮೊದಲ ಅಲೆಯಲ್ಲಿ ಕೇವಲ ಮಹಿಳೆಯರು ಹೊರ ಜಗತ್ತಿಗೆ ತೆರೆದುಕೊಳ್ಳಲು ಬೇಕಾದ ಅಂಶಗಳಿಗೆ ಹೆಚ್ಚು ಒತ್ತು ನೀಡಲಾಯಿತು. ಆದರೆ ತೀವ್ರಗಾಮಿ ಸ್ತ್ರೀವಾದಿಗಳು ಎರಡನೆ ಅಲೆಯ ಸಂದರ್ಭದಲ್ಲಿ ಮಹಿಳೆಯ ನೈಜ ಸಮಸ್ಯೆಗಳನ್ನು ಅರಿತು ಅವುಗಳನ್ನು ಪರಿಹರಿಸುವ ಮೂಲಕ ಸ್ತ್ರೀಯರ ವಿಮೋಚನೆ ಮಾಡುವ ನಿಟ್ಟಿನಲ್ಲಿ ಯೋಚಿಸುತ್ತಾರೆ. ಮಹಿಳೆಯರಿಗೆ ಕೇವಲ ರಾಜಕೀಯ ಹಕ್ಕುಗಳು, ಆಸ್ತಿ ಹಕ್ಕುಗಳು ಅಷ್ಟೆ ಸಾಲದು ಅವಳು ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಮುಂದುವರೆದರೆ ಅಷ್ಟೇ ಅವಳ ಸಬಲೀಕರಣ ಸಾಧ್ಯವಾಗುವುದಿಲ್ಲ. ಅವಳ ನೈಜವಾದ ವಿಮೋಚನೆಯಾಗಬೇಕೆಂದರೆ ಮೊದಲು ಆಕೆ ಮನೆಯಿಂದ ಅಂದರೆ ಕುಟುಂಬ ವ್ಯವಸ್ಥೆಯ ಬಂಧನಗಳಿಂದ ಮುಕ್ತಳಾಗಬೇಕು. ಕುಟುಂಬದಲ್ಲಿ ಆಕೆಯನ್ನು ಸ್ತ್ರೀ ಕೇಂದ್ರಿತ ಪಾತ್ರಗಳು ಎಂಬುದನ್ನು ನಿರ್ಮಿಸುವ ಮೂಲಕ ಹಿಡಿದಿಡುವ ಪ್ರಯತ್ನಗಳನ್ನು

ಮಾಡಲಾಗುತ್ತಿದೆ. ಮೊದಲು ಮಹಿಳೆ ಇವುಗಳಿಂದ ಬಿಡುಗಡೆಗೊಳ್ಳಬೇಕು. ಅವಳಿಗಿರುವ ಅವಕಾಶಗಳನ್ನು ಆಕೆ ಪಡೆದುಕೊಳ್ಳಬೇಕೆಂದರೆ ಮೊದಲು ಅವಕಾಶಗಳನ್ನು ಪಡೆಯಲು ಅವಳಿಗಿರುವ ಅಡೆತಡೆಗಳನ್ನು ನಿವಾರಣೆ ಮಾಡಬೇಕು ಎಂಬುದು ಸ್ತ್ರೀವಾದಿಗಳ ಚಿಂತನೆ. ಮಹಿಳೆಯರ ಸಾಧನೆಗೆ ಕೌಟುಂಬಿಕ ಬಂಧನಗಳೆ ಅಡ್ಡಿಗಳಾಗಿವೆ ಎಂಬುದು ಸ್ತ್ರೀವಾದಿಗಳ ನಂಬಿಕೆ. ನಿಜವಾದ ಅರ್ಥದಲ್ಲಿ ಮಹಿಳೆ ವಿಮೋಚನೆ ಹೊಂದಬೇಕಾದರೆ ಆಕೆ ಕೌಟುಂಬಿಕ ಬಂಧನಗಳು, ಅಡೆತಡೆಗಳು, ಪುರುಷಪ್ರಧಾನ ಸಮಾಜ ನಿರ್ಮಿಸಿ (ಸೃಷ್ಟಿಸಿ) ಹೊರಿಸಿರುವ ಹೆಣ್ತನದ ಜವಾಬ್ದಾರಿಗಳನ್ನು ಬಿಡಿಸಿಕೊಂಡು ಕುಟುಂಬದಿಂದ ಹೊರಬಂದಾಗ ಮಾತ್ರ ನಿಜವಾದ ಸ್ತ್ರೀ ವಿಮೋಚನೆಯಾಗುತ್ತದೆ ಎಂದು ಬಲವಾಗಿ ನಂಬುತ್ತಾರೆ. ಹಲವು ಸ್ತ್ರೀವಾದಿಗಳು ಮಹಿಳೆಯರ ಶೋಷಣೆಯ ಹಲವು ಮೂಲಗಳನ್ನು ತಮ್ಮ ಬರವಣಿಗೆಗಳಲ್ಲಿ ತುಂಬಾ ಸೂಕ್ಷ್ಮವಾಗಿ ವಿವರಿಸಿದ್ದಾರೆ.

ಬೆಟ್ಟಿ ಫ್ರೀಢನ್ ಅವರ 'ದಿ ಫೆಮಿನೈಸ್ ಮಿಸ್ಟಿಕ್' (2010) ಈ ಗ್ರಂಥದಲ್ಲಿ ಹೇಳಿರುವಂತೆ ಮಹಿಳೆಯರಿಗೆ ತಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬೆಳೆಸಿಕೊಳ್ಳಲು ಸಾಧ್ಯವಾಗದಿರುವುದೇ ಒಂದು ಹೆಸರಿಲ್ಲದ ಸಮಸ್ಯೆಯಾಗಿದೆ. ಹತ್ತಾರು ವರುಷ ಮನೆಗೆಲಸದಲ್ಲಿ ತೊಡಗಿ ಮಕ್ಕಳನ್ನು ಹೆರುತ್ತಾ ಇಡೀ ಕುಟುಂಬವನ್ನು ನಿರ್ವಹಿಸುವ ಸ್ತ್ರೀಯರು ಎದುರಿಸುವ ಸಮಸ್ಯೆಗೆ ಹೆಸರೇ ಇಲ್ಲ. ಈ ಸಮಸ್ಯೆಯು 'ಸ್ತ್ರೀಯಾತ್ಮಕ ಮಿಥ್ಯೆ' ಯಾಗಿದ್ದು ಸ್ತ್ರೀಯ ಮೇಲೆ ಹೇರಲಾಗಿದೆ. ಈ ಮಿಥ್ಯೆಯು ಅವರು ತಮ್ಮ ಅನನ್ಯತೆಯನ್ನು ಕಳೆದುಕೊಂಡು ಇರುವ ವ್ಯವಸ್ಥೆಗೆ ಅಂಟಿಕೊಳ್ಳುವಂತೆ ಮಾಡುತ್ತದೆ. ಈ ಪ್ರಕ್ರಿಯೆಯಲ್ಲಿ ಸ್ತ್ರೀಯರು ಅತೃಪ್ತರಾಗಿ ಉಳಿಯುತ್ತಾರೆ. ಮಾನಸಿಕವಾಗಿ ಅಸ್ವಸ್ಥರಾಗುತ್ತಾರೆ ಎಂಬ ಅಂಶವನ್ನು ಹೊರತರುತ್ತಾರೆ. ಫ್ರೀಢನ್ ಮಹಿಳೆಯರು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಅನೇಕ ಸಾಮಾಜಿಕ ನಿರ್ಬಂಧಗಳಿವೆ, ಅವರು ಮನೆಯ ಕೆಲಸವಲ್ಲದೆ ಹೊರಗಿನ ಕೆಲಸವನ್ನು ಮಾಡಬಲ್ಲರು, ಶ್ರಮದ ಮಾರುಕಟ್ಟೆಯಲ್ಲಿ ತಮ್ಮ ಪ್ರತಿಭೆಯನ್ನು ತೋರಿಸಬಲ್ಲರು ಎಂದು ಹೇಳಿದರು. ಇದಕ್ಕೆ ಕೆಲವು ಸಲಹೆಗಳನ್ನು ನೀಡುತ್ತಾರೆ. ಮಕ್ಕಳ ಸಾಮಾಜೀಕರಣದಲ್ಲಿ ಬದಲಾವಣೆ, ಹೆಣ್ಣು ಮಕ್ಕಳಿಗೆ ಶಿಕ್ಷಣದ ಅವಕಾಶಗಳನ್ನು ಹೆಚ್ಚಿಸುವುದು, ಮನೆಯಲ್ಲಿದ್ದುಕೊಂಡು ಓದುವ ಕೋರ್ಸುಗಳನ್ನು ತೆರೆಯುವುದು, ಬೇಸಿಗೆ ಕೋರ್ಸುಗಳನ್ನು ಪ್ರಾರಂಭಿಸುವುದು, ಮಹಿಳೆಯರು ವಿಶೇಷ ಪ್ರತಿಭೆಗಳನ್ನು ಬೆಳಸಿಕೊಳ್ಳುವುದು, ಉದ್ಯೋಗಸ್ಥ ಮಹಿಳೆಯರಿಗೆ ಶಿಶು ಕೇಂದ್ರಗಳನ್ನು ಸ್ಥಾಪಿಸುವುದು ಇತ್ಯಾದಿ...

ಕೇಟ್‌ಮಿಲೆಟ್ ತನ್ನ 'ಸೆಕ್ಸುಯಲ್ ಪಾಲಿಟಿಕ್ಸ್' ಕೃತಿಯಲ್ಲಿ ಲೈಂಗಿಕ ರಾಜಕಾರಣ ಹಾಗೂ ಪುರುಷ ಪ್ರಧಾನತೆಯ ನಡುವಿನ ಸಂಬಂಧವನ್ನು ಚರ್ಚಿಸುತ್ತಾ, ಲೈಂಗಿಕ ರಾಜಕಾರಣವು ಕುಟುಂಬದೊಳಗೆ ಮನೋಸಾಮಾಜಿಕ ಪರಿಸ್ಥಿತಿಯೊಂದಿಗೆ ಪುರುಷ ಪ್ರಧಾನತೆಯನ್ನು ಹುಟ್ಟುಹಾಕುತ್ತದೆ. ನಂತರ ಸಮಾಜದ ಆರ್ಥಿಕ, ರಾಜಕೀಯ ಕ್ಷೇತ್ರಗಳಿಗೂ ವಿಸ್ತಾರಗೊಂಡು ಅಲ್ಲೂ ಕಾರ್ಯ ನಿರ್ವಹಿಸುತ್ತದೆ. ಮಹಿಳೆಯರ ತುಳಿತಕ್ಕೆ ಜೈವಿಕ ನೆಲೆಯಿದೆ, ಆದರೆ ಅದು ಸ್ತ್ರೀತ್ವದ ಸಾಮಾಜಿಕ ರಚನೆಯನ್ನು ಅವಲಂಬಿಸಿದೆ ಎಂದು ಹೇಳುತ್ತಾಳೆ. 'ವೈಯಕ್ತಿಕವಾದದು ರಾಜಕೀಯವಾಗಿರುತ್ತದೆ' ಎಂಬುದು ಮಿಲೆಟ್‌ಳ ಕ್ಲಾಸಿಕ್ ಹೇಳಿಕೆಯಾಗಿದೆ. ಅಂದರೆ ವೈಯಕ್ತಿಕ ವಿಷಯಗಳಲ್ಲೂ ಅಧಿಕಾರ ರಚನೆ ಕೆಲಸ ಮಾಡುತ್ತಿರುತ್ತದೆ. ಇದು ಲೈಂಗಿಕ ಸಂಬಂಧದಲ್ಲೂ ಕಂಡುಬರುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯು ರೂಪಿಸಿರುವ ಲೈಂಗಿಕ ರಾಜಕೀಯದ ನಂಬಿಕೆ, ಮೌಲ್ಯಗಳನ್ನು ಸ್ತ್ರೀಯರು ಆಂತರೀಕರಿಸಿಕೊಂಡಿರುವುದರಿಂದ ಅದರ ಶೋಷಣೆ ವಿರುದ್ಧ ಬಂಡೇಳುವ ಸುಪ್ತ ಬಯಕೆಯನ್ನು

ಹೊಂದಿಲ್ಲ. ಅದರ ಹಿಂದಿರುವ ಉದ್ದೇಶ, ಪೊಳ್ಳುತನವನ್ನು ಅರಿತರೆ ಮಾತ್ರ ಸ್ತ್ರೀಯರು ಸ್ವಾತಂತ್ರ್ಯರಾಗಲು ಸಾಧ್ಯ ಎನ್ನುತ್ತಾಳೆ.

ಶುಲಾಮಿತ ಫೈರ್‌ಸ್ಟೋನ್ ತನ್ನ 'ದಿ ಡಯಲೆಕ್ಟಿಕ್ ಆಫ್ ಸೆಕ್ಸ್: ಎ ಕೇಸ್ ಫಾರ್ ಫೆಮಿನಿಸ್ಟ್ ರೆವಲ್ಯೂಷನ್'ನಲ್ಲಿ ಸ್ತ್ರೀಯರ ಸಂತಾನೋತ್ಪತ್ತಿ ಮತ್ತು ಉತ್ಪಾದನಾ ಪಾತ್ರಗಳು ಭಿನ್ನವಾಗಿದೆ. ಸಂತಾನೋತ್ಪತ್ತಿಯ ಜೈವಿಕ ವಾಸ್ತವಿಕತೆಯು ಹೆಣ್ಣನ್ನು ಗೃಹಕೃತ್ಯಗಳಿಗೆ ಮಿತಿಗೊಳಿಸಿ ಸಾಮಾಜಿಕವಾಗಿ, ಆರ್ಥಿಕವಾಗಿ ಕೆಳಸ್ಥಾನವನ್ನು ಹೊಂದುವಂತೆ ಮಾಡುತ್ತದೆ ಎಂದು ಪ್ರತಿ ಪಾದಿಸಿದ್ದಾರೆ. ಮಹಿಳೆ ಸಂತಾನೋತ್ಪತ್ತಿ ಮೇಲೆ ನಿಯಂತ್ರಣ ಹೊಂದಬೇಕು ಎಂದು ಕರೆ ಕೊಡುತ್ತಾಳೆ. ತಮ್ಮ ದೇಹದ ಮೇಲೆ ಅಧಿಕಾರ ಹೊಂದಬೇಕು. ದೈಹಿಕ ಭಿನ್ನತೆಯಿಂದ ಜಂಡರ್ ಶ್ರಮವಿಭಜನೆ ಹುಟ್ಟಿಕೊಂಡು ಅದರಿಂದ ಜಂಡರ್ ವ್ಯವಸ್ಥೆ ಹಾಗೂ ವರ್ಗ ವ್ಯವಸ್ಥೆಗಳು ಹುಟ್ಟಿಕೊಂಡುವು, ಅವೆರಡರ ವಿರುದ್ಧ ಒಟ್ಟಾಗಿ ಹೋರಾಡಬೇಕು. ಎಂಬುದು ಶುಲಾಮಿತಳ ವಾದ. ಈಕೆ ಮಹಿಳೆಯರ ತುಳಿತದ ಕಾರಣವನ್ನು ಸಂತಾನೋತ್ಪತ್ತಿ ಕ್ರಿಯೆಯಲ್ಲಿ ಹುಡುಕುತ್ತಾಳೆ. ಮುಕ್ತಿಯೂ ಅದರಿಂದಲೇ ಆಗಬೇಕೆನ್ನುತ್ತಾಳೆ. ಸಂತಾನೋತ್ಪತ್ತಿಯೇ ಸ್ತ್ರೀಯ ಅಧೀನತೆಗೆ ಮೂಲಕಾರಣವಾಗಿದೆ. ಜೈವಿಕ ತಾಯ್ತನ, ಋತುಸ್ರಾವ, ಭಿನ್ನ ಲೈಂಗಿಕ ಸಂತಾನೋತ್ಪತ್ತಿ ಆಚರಣೆಗಳು ಮಹಿಳೆಯರ ತುಳಿತಕ್ಕೆ ದಾರಿ ಮಾಡಿಕೊಡುತ್ತದೆ. ಮಹಿಳೆಯ ದೇಹವೇ ಅವಳ ಗುಲಾಮತನಕ್ಕೆ ಕಾರಣವಾಗಿದೆ. ತಾಂತ್ರಿಕ ಬೆಳವಣಿಗೆಯಿಂದ ಸಂತಾನೋತ್ಪತ್ತಿ ಮೇಲೆ ನಿಯಂತ್ರಣ ಹೊಂದಿ ಶೋಷಣೆಯಿಂದ ಮುಕ್ತಳಾಗಬಹುದು ಎನ್ನುತ್ತಾಳೆ.

ಸಿಮನ್.ದಿ. ಬೋವಾ (1949) ಇವರ 'ದಿ ಸೆಕೆಂಡ್ ಸೆಕ್ಸ್' ಗ್ರಂಥವು ಮಹಿಳೆ ಮತ್ತು ಅವಳ ಸುತ್ತಾ ಹೆಣೆದುಕೊಂಡಿರುವ ವಿಷಯಗಳನ್ನು ಸಮಗ್ರವಾಗಿ ವಿಮರ್ಶಾತ್ಮಕವಾಗಿ ಚಿತ್ರಿಸುವ ಕೃತಿಯಾಗಿದೆ. ಜೈವಿಕ, ಮನೋ ವೈಚಾರಿಕ, ಚಾರಿತ್ರಿಕ, ಲೈಂಗಿಕ, ಸಾಹಿತ್ಯಿಕ ಮತ್ತು ಸಾಮಾಜಿಕ ಹಿನ್ನೆಲೆಯಲ್ಲಿ ಸ್ತ್ರೀಯ ಬದುಕನ್ನು ಬೋವಾ ಸೂಕ್ಷ್ಮವಾಗಿ ಸಂಕೀರ್ಣವಾಗಿ, ತಾರ್ಕಿಕವಾಗಿ ತೆರೆದಿಡುತ್ತಾಳೆ. ಪುರುಷ ತನ್ನನ್ನು ತಾನು ಎಂದುಕೊಂಡು ಮಹಿಳೆಯನ್ನು ಅನ್ಯ ಎಂದು ಭಾವಿಸುತ್ತಾನೆ. ಪುರುಷರಿಗೆ ವಿಧೇಯರಾಗಿ ಬಿಟ್ಟರೆ ಉಳಿದಂತೆ ಜೀವನದಲ್ಲಿ ಬೇಕಾದುದೆಲ್ಲ ಸಿಗುವುದಾದರೆ ಇನ್ನೇನು ಬೇಕು? ಎಂಬ ಪ್ರಶ್ನೆಗಳಿವೆ. ಆದರೆ ಬೋವಾ ಹೇಳುವಂತೆ ಸುಖ ಮತ್ತು ಬೇಕಾದುದೆಲ್ಲ ಎಂಬುದು ಸ್ಪಷ್ಟವಾಗಿರುವುದಿಲ್ಲ. ಒಬ್ಬ ಮಹಿಳೆಗೆ ಬೇಕದುದೆಲ್ಲ ಸಿಕ್ಕಿದಾಕ್ಷಣ ಅವಳು ಸುಖಿ ಎಂದು ಹೇಳಬಹುದು. ಆದರೆ ಸುಖವನ್ನು ಅಳೆಯಲು ಮಾನದಂಡಗಳಿಲ್ಲ. ಅಲ್ಲದೆ ಬೇಕಾದುದನ್ನು ಪಡೆಯಲು ಮತ್ತೊಂದನ್ನು ಬಿಟ್ಟುಕೊಡಬೇಕಾಗುತ್ತದೆ ಅನ್ನುವುದು ಅಷ್ಟೇ ನಿಜ. ವಿಧೇಯತೆಗೆ, ರಕ್ಷಣೆ ಹಾಗೂ ಸವಲತ್ತುಗಳನ್ನು ಪಡೆಯಲು ಸ್ತ್ರೀಯರು ಸಮಾನತೆ, ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ಬಿಟ್ಟುಕೊಡಬೇಕಾಗುತ್ತದೆ. ಸುಖಕ್ಕೋಸ್ಕರ ಅಧೀನತೆ, ಅನ್ಯತೆಯನ್ನು ಒಪ್ಪಿಕೊಳ್ಳುವಂತಹ ವ್ಯಕ್ತಿಗಿಂತ ಸಮಾನತೆ, ಬಿಡುಗಡೆಯನ್ನು ಬಯಸುವ ವ್ಯಕ್ತಿಗೆ ಬೋವಾ ತನ್ನ ಒಲವನ್ನು ತೋರುತ್ತಾಳೆ.

ಮಹಿಳಾ ವಿಮೋಚನಾ ಗುಂಪು ಅನುಸರಿಸಿದ ವಿಧಾನವು ಸಮಸ್ಯೆಯ ಬೇರಿಗೆ ಕೈಹಾಕುವುದು, ಜಂಡರ್ ಸಂಬಂಧ ಮತ್ತು ಸಾಮಾಜಿಕ ಸಂಸ್ಥೆಗಳಲ್ಲಿ ಕ್ರಾಂತಿಕಾರಕ ಪರಿವರ್ತನೆ ತರುವುದು, ಸಮಾಜದ ಸಾಂಪ್ರದಾಯಿಕ ರಚನೆಯನ್ನು ಪ್ರಶ್ನಿಸುವುದು ಮತ್ತು ಬದಲಾಯಿಸುವುದೇ ಆಗಿತ್ತು. ಸ್ತ್ರೀವಾದಿಗಳು ಮಹಿಳೆಯರು ಮಹಿಳೆಯರೆಂಬ ಕಾರಣಕ್ಕಾಗಿ ತಾರತಮ್ಯ ಕ್ಕೊಳಗಾಗುತ್ತಿದ್ದಾರೆ ಎಂಬುದನ್ನು ಕಂಡುಕೊಂಡರು, 'ವೈಯಕ್ತಿಕವಾದದು ರಾಜಕೀಯ' ಎಂದು ಹೇಳಿದರು. ಸ್ತ್ರೀಯರ ವೈಯಕ್ತಿಕ ಸಮಸ್ಯೆಗಳಿಗೆ ಸಾಮಾಜಿಕ ಕಾರಣವಿದೆ ಎಂಬುದನ್ನು

ತೋರಿಸಿದರು. ಅತ್ಯಾಚಾರ, ಗರ್ಭಪಾತ, ಉದ್ಯೋಗಕ್ಕೆ ಸಂಬಂಧಪಟ್ಟಂತೆ ಮಹಿಳೆಯರ ಪರವಾಗಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡುವುದು, ಕಾನೂನು ತಿದ್ದುಪಡಿ, ಮಹಿಳಾ ನಿರ್ದಿಷ್ಟ ಕಾಯ್ದೆಗಳ ಅನುಷ್ಠಾನ ಮೊದಲಾದ ಕಾರ್ಯದಲ್ಲಿ ತೊಡಗಿದರು. ಹೀಗೆ ಹಲವು ಸ್ತ್ರೀವಾದಿಗಳು ಮಹಿಳೆಯರ ತುಳಿತ, ಅಧೀನತೆ, ಶೋಷಣೆಗೆ, ಅವಳಿಗಿರುವ ಜವಾಬ್ದಾರಿಗಳು, ಕೌಟುಂಬಿಕ ಹೊಣೆಗಳು, ಸಂತಾನೋತ್ಪತ್ತಿ ಕಾರ್ಯಗಳು, ಸಾಮಾಜಿಕ ಕಟ್ಟುಪಾಡುಗಳೆ ಕಾರಣವಾಗಿವೆ ಎಂಬುದನ್ನು ಬಲವಾಗಿ ಪ್ರತಿಪಾದಿಸಿ, ಆ ಎಲ್ಲಾ ಬಂಧನಗಳಿಂದ ಮುಕ್ತಿ ಹೊಂದಿ ಮಹಿಳೆ ಹೊರಬಂದಾಗ ಮಾತ್ರ ನಿಜವಾದ ಅರ್ಥದಲ್ಲಿ ಮಹಿಳಾ ವಿಮೋಚನೆ ಸಾಧ್ಯವೆಂದು ಹೇಳುತ್ತಾರೆ.

**ಉಪಸಂಹಾರ**

ಒಟ್ಟಾರೆಯಾಗಿ ಮಹಿಳಾ ವಿಮೊಚನೆಯು ಸ್ತ್ರೀವಾದದ ಪ್ರಮುಖ ಉದ್ದೇಶವಾಗಿದ್ದು, ವಿಭಿನ್ನ ಪಂಥಗಳಿಗೆ ಸೇರಿದ ಸ್ತ್ರಿವಾದಿಗಳು ಸ್ತ್ರೀಶೊಷಣೆ ಮತ್ತು ದೌರ್ಜನ್ಯಗಳಿಗೆ ಹಲವು ಕಾರಣಗಳನ್ನು ಗುರಿತಿಸುತ್ತಾ, ಸ್ತ್ರೀ ವಿಮೊಚನೆಯ ಮಾರ್ಗಗಳನ್ನು ಬೇರೆ ಬೇರೆ ರೀತಿಯಲ್ಲಿ ವಿವರಿಸಿದ್ದಾರೆ. ಆದರೂ ಅವರೆಲ್ಲರ ಉದ್ದೇಶ ಮಾತ್ರ ಅಂತಿಮವಾಗಿ ಸ್ತ್ರೀ ವಿಮೋಚನೆಯೇ ಆಗಿದೆ. ಮಹಿಳೆಯರಿಗೆ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ನೀಡುವುದರಿಂದ, ಪಿತೃಪ್ರಧಾನತೆಯ ಅಂಶಗಳನ್ನು ತೊಡೆದುಹಾಕುವುದರಿಂದ, ಸಮಾಜೀಕರಣದ ರೀತಿಗಳನ್ನು ಬದಲಾಯಿಸುವುದರಿಂದ, ಪಿತೃಪ್ರಧಾನ ಧೋರಣೆಗಳನ್ನು ಬದಲಾಯಿಸುವುದರಿಂದ, ಮಹಿಳೆಗೆ ಸಮಾನ ಅವಕಾಶಗಳನ್ನು ನೀಡಿ ಪ್ರೋತ್ಸಾಹಿಸುವುದರಿಂದ, ಸ್ತ್ರೀಪರ ಕಾನೂನುಗಳಿಂದ ಮಹಿಳಾ ವಿಮೋಚನೆ ಸಾಧ್ಯವಾಗುತ್ತದೆ ಎಂಬುದೇ ಸ್ತ್ರೀವಾದಿಗಳ ಅಭಿಪ್ರಾಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಹೆಮಲತಾ, ಹೆಚ್.ಎಂ. (2010). *ಮಹಿಳಾ ಅಧ್ಯಯನ– ಭಾಗ 5.* ಡಿ.ವಿ.ಕೆ. ಮೂರ್ತಿ.
- ಹೆಮಲತಾ, ಹೆಚ್.ಎಂ. (2008). *ಮಹಿಳಾ ಅಧ್ಯಯನ– ಭಾಗ 4.* ಡಿ.ವಿ.ಕೆ. ಮೂರ್ತಿ.
- ಹೆಮಲತಾ, ಹೆಚ್.ಎಂ. (2004). *ಮಹಿಳಾ ಅಧ್ಯಯನ– ಭಾಗ 1.* ಡಿ.ವಿ.ಕೆ. ಮೂರ್ತಿ.
- ಸುಮಿತ್ರಾಬಾಯಿ, ಬಿ. ಎನ್ & ಗಾಯಿತ್ರಿ, ಎನ್. (1995). *ಸ್ತ್ರೀವಾದಿ ಪ್ರವೇಶಿಕೆ.* ಕರ್ನಾಟಕ ಲೇಖಕಿಯರ ಸಂಘ.
- De Beauvoir, S., & Parshley, H. M. (1949). *The second sex*. https://cds.cern.ch/record/2728998
- Firestone, S. (1972). *The Dialectic of Sex: The case for Feminist Revolution*. https://ci.nii.ac.jp/ncid/BA20741946
- Friedan, B. (2010). *The feminine Mystique*. Penguin Classics.
- Millett, K. (2016). *Sexual politics*. Columbia University Press.
- Suguna. B. (2009). *Women's Movement.* Discovery publishing House PVT.LTD.